

ಅಪೂರ್ವ ಅಕ್ಷರಶಃ ಅಪರಾಧಿ ಭಾವದಿಂದ ಕಂಗಾಲಾಗಿದ್ದ! ಮೊನ್ನೆ ಮೊನ್ನೆ ಗಣೇಶಚತುರ್ಥಿ ಹಬ್ಬದ ದಿನ ಚೆನ್ನಾಗಿಯೇ ಮಾತಾಡಿಕೊಂಡು, ಓಡಾಡಿಕೊಂಡು ಇದ್ದವನು ಮರುದಿನದಿಂದ ಮಾತಾಡುವುದನ್ನೇ ನಿಲ್ಲಿಸಿದ್ದನ್ನು ಕಂಡು ಮನೆಯವರೂ ಆತನ ಗೆಳೆಯರಾದಿಯಾಗಿ ಊರವರೂ ಆಶ್ಚರ್ಯಚಕಿತರಾಗಿದ್ದರು. ಯಾರು ಮಾತನಾಡಿಸಿದರೂ ಮಾತನಾಡದ ಈತನಿಗೆ ಮನೆಯವರೆಲ್ಲ ದೆವ್ವ ಹಿಡಿದುಕೊಂಡಿದೆ ಎಂದೇ ನಿರ್ಧರಿಸಿದ್ದರು. ಆದರೆ ಆತನ ಗೆಳೆಯರಿಗೆ ಮಾತ್ರ ಆತ ಮತ್ತೆ ಮಾತಾಡುತ್ತಾನೆಂಬ ಭರವಸೆ ಇತ್ತಾದರೂ ಒಂದು ವಾರಕ್ಕೂ ಹೆಚ್ಚಿಗೆ ದಿನ ಈತ ಮೌನವಾಗಿಯೇ ಇದ್ದುದನ್ನು ಕಂಡು ಅವರೂ ಭರವಸೆಯನ್ನು ಸ್ವಲ್ಪಸ್ವಲ್ಪವಾಗಿಯೇ ಕಳೆದುಕೊಳ್ಳುತ್ತ ಬಂದಿದ್ದರು.

★★★

ಬೆಳ್ಳಂಬೆಳಗ್ಗೆ ಅಪೂರ್ವ ತನ್ನ ಗೆಳೆಯ ಸುಬ್ರಮಣಿಯನ್ನು ಬೇಗ ಎಬ್ಬಿಸಿ ಸಮುದ್ರದ ದಂಡೆಗೆ ಕರೆದುಕೊಂಡು ಬಂದ.

"ನಿನಗೇನಾಯ್ತು ಮಾರಾಯಾ?!... ಸಮುದ್ರದ ಬದಿಗೆ ಬರಲು ಇದೊಂದು ಸಮಯವಾ? ಬೆಳಗ್ಗಿನ ನಿದ್ರೆಯನ್ನೂ ಹಾಳು ಮಾಡಿದೆ. ನೀನು ಮಾತಾಡುವುದನ್ನೇ ನಿಲ್ಲಿಸಿದ್ದಿಯಂತೆ! ನಿನ್ನದು ಕತೆ ಎಂತಾ? ಮಾತು ಹೊರಡುವುದೇ ಇಲ್ಲವಾ?"

"ಸುಬ್ರಮಣಿ... ನಂಗೊಂದು ತಲೆಬಿಸಿಯಾಗಿದೆ."

"ಅರೆ! ನಿಂಗೆಂತ ಮಂಡೆಬಿಸಿ, ಹಾಲು ಕೊಡುವ ದನ ಕಳೆದು ಹೋಯ್ತಾ? ಅಥವಾ ಗದ್ದೆಯಲ್ಲಿ ನೀರು ತುಂಬಿ ನೆಟ್ಟಿಯೆಲ್ಲ ಕೊಚ್ಚಿಕೊಂಡ ಹೋಯ್ತಾ? ಅಲ್ಲ! ನೀ ಮಾತಾಡಲಿಕ್ಕೆ ಶುರುಮಾಡಿದ್ದು ಯಾವಾಗ?"

"ಅದೆಲ್ಲ ಈಗ ಬೇಡ... ನನ್ನ ಪ್ರಶ್ನೆಗೆ ಉತ್ತರ ಕೊಡು ಅಷ್ಟೆ."

"ಎಂಥಾ ಪ್ರಶ್ನೆ ಮಾರಾಯ ಅದು ಈ ಬೆಳ್ಳಂಬೆಳಗ್ಗೆ... ಆಮೇಲೆ ಕೇಳಿದರೆ ಆಗುತ್ತಿರಲಿಲ್ಲವಾ? ಛೆ!... ಬೇಗ ಕೇಳು."

"ಸುಬ್ರಮಣಿ... ತಮಾಷೆ ಮಾಡಬೇಡ, ಚೌತಿ ಹಬ್ಬದ ದಿನ ಚಂದ್ರನ ನೋಡಿದರೆ ಏನಾಗುತ್ತದೆ?"

"ಗೋವಿಂದಾ... ಮುಗೀತು ನಿನ್ನ ಕತೆ... ಓಹೋ... ಇದಕ್ಕೆ ಮಾತಾಡುವುದು ನಿಲ್ಲಿಸಿದ್ದಾ?"